# ಕ್ಲಾರಾ ಜೆಟ್ಕಿನ್

ಮಾರ್ಚ್ ಎಂದರೆ ಮಹಿಳಾ ದಿನಾಚರಣೆಯ ಸಡಗರ. ಕಚೇರಿಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗುತ್ತದೆ. ಪ್ರಸಿದ್ಧರಾದ ಮಹಿಳೆಯರ ಹೆಸರಿನಲ್ಲಿ ಪ್ರಶಸ್ತಿಗಳ ಘೋಷಣೆ ಹಾಗೂ ಅವುಗಳ ಪ್ರದಾನ ಸಮಾರಂಭ ನಡೆಯುತ್ತವೆ. ಇನ್ನೊಂದೆಡೆ ಅವಳ ವಸ್ತ್ರ, ನಡೆನುಡಿ, ದೇವಸ್ಥಾನ ಪ್ರವೇಶ ಕುರಿತಾದ ರಗಳೆಗಳು ಹುಟ್ಟಿಕೊಳ್ಳುತ್ತವೆ. ಮತ್ತೊಂದೆಡೆ ಮಹಿಳೆಯರ ಘನತೆಯನ್ನು ಎತ್ತಿಹಿಡಿಯುವಂತೆ ಪ್ರಶಸ್ತಿಗಳು ಘೋಷಣೆಯಾಗುತ್ತವೆ.

ವಿಶ್ವ ಮಹಿಳಾ ದಿನದ ರೂವಾರಿ 'ಕ್ಲಾರಾ ಜೆಟ್ಕಿನ್'ಯನ್ನು ನಾವು ಇಂದು ಅಭಿಮಾನದಿಂದ ನೆನಪಿಸಿಕೊಳ್ಳಬೇಕು. 19ನೇ ಶತಮಾನ ಸ್ತ್ರೀವಾದಿ ಚಳವಳಿಯ ಆರಂಭದ ಕಾಲಘಟ್ಟ. ಈ ಚಳವಳಿ ಆರಂಭದಲ್ಲಿ ಮಧ್ಯಮ ವರ್ಗದ ಮಹಿಳೆಯರ ಸ್ವಾತಂತ್ರ್ಯದ ಬಯಕೆಯನ್ನು ವ್ಯಕ್ತಪಡಿಸುತ್ತಿತ್ತು. ಅದೇ ಸಮಯದಲ್ಲಿ ಯೂರೋಪ್ ಮತ್ತು ಅಮೆರಿಕದಲ್ಲಿ ನಡೆದ ಕೈಗಾರಿಕಾ ಕ್ರಾಂತಿಯಿಂದಾಗಿ ಹೊಸ ನಗರಗಳು ಹುಟ್ಟಿಕೊಂಡವು. ಅದರ ಜೊತೆ ದುಡಿಯುವ ಮಹಿಳೆಯರ ವರ್ಗವೊಂದು ಹುಟ್ಟಿಕೊಂಡಿತು. ದುಡಿಯುವ ಮಹಿಳೆಯರಿಗೆ ಸಂಸಾರ, ಸಂತಾನ, ವೇತನದಲ್ಲಿ ತಾರತಮ್ಯ ಸೇರಿ ಹಲವು ಸಮಸ್ಯೆಗಳಿದ್ದವು. ಪುರುಷ ಕಾರ್ಮಿಕ ಸಂಘಟನೆಗಳು ದುಡಿಯುವ ಮಹಿಳೆಯರ ಉದ್ಯೋಗ ಹಾಗೂ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಹೀಗಾಗಿ ಮಧ್ಯಮ ವರ್ಗದ ಮಹಿಳೆಯರ ಸ್ವಾತಂತ್ರ್ಯದ ಬಯಕೆ ಹಾಗೂ ಕಾರ್ಮಿಕ ಮಹಿಳೆಯರ ಸಮಸ್ಯೆಗಳ ಬದುಕು ಪರಸ್ಪರ ಸಂಧಿಸಿದವು.

1839ರಲ್ಲಿ ಇಂಗ್ಲೆಂಡಿನಲ್ಲಿ ಆರಂಭವಾದ ದುಡಿಯುವ ಮಹಿಳೆಯರ ಹೋರಾಟವನ್ನು 'ಚಾರ್ಟಿಸ್ಟ್ ಚಳವಳಿ' ಎಂದು ಕರೆಯಲಾಯಿತು. ದುಡಿಮೆಯ ಅವಧಿ, ಸಮಾನ ವೇತನ, ಆರೋಗ್ಯ ಮತ್ತು ಆರ್ಥಿಕ ಸೌಲಭ್ಯಗಳನ್ನು ಕುರಿತ ಪ್ರಸ್ತಾವನೆಗಳು ಈ ಚಳವಳಿಯ ಮುಂದಿದ್ದವು. ಇದರ ಪರವಾಗಿ ಹನ್ನೆರಡು ಲಕ್ಷಕ್ಕೂ ಹೆಚ್ಚು ಜನ ಸಹಿ ಮಾಡಿದ್ದ ಜ್ಞಾಪನಾಪತ್ರವನ್ನು 1840ರ ಜೂನ್ 14ರಂದು ಪಾರ್ಲಿಮೆಂಟಿಗೆ ಸಲ್ಲಿಸಲಾಯಿತು. ಈ ಹೋರಾಟದಲ್ಲಿ ಬಂಧನಕ್ಕೊಳಗಾದವರು ಸೆರೆಮನೆಯಿಂದಲೇ ಹೋರಾಟ ಮುಂದುವರೆಸಿದ್ದರು. ಈ ಚಳವಳಿ ಮಹಿಳೆಯರ ಸ್ವಾತಂತ್ರ್ಯ, ಸಮಾನತೆಯನ್ನು ಮುಖ್ಯವಾಗಿರಿಸಿಕೊಂಡಿದ್ದರೂ ಲಿಂಗಸಮಾನತೆಯನ್ನು ತನ್ನ ಗಮನದಲ್ಲಿಟ್ಟುಕೊಂಡಿತ್ತು.

ಚಿಕಾಗೋದ ಕೈಗವುಸು ತಯಾರಿಕೆ ಹಾಗೂ ಜರ್ಮನಿಯ ಗಿರಣಿಗಳಲ್ಲಿ ದುಡಿಯುತ್ತಿದ್ದ ಮಹಿಳೆಯರು ಕೆಟ್ಟ ಪರಿಸ್ಥಿತಿಯಲ್ಲಿದ್ದರು. ಈ ಮಹಿಳೆಯರು ತಮ್ಮ ಸಮಸ್ಯೆಗೆ ಪರಿಹಾರಗಳನ್ನು 'ಮಹಿಳಾ ಟ್ರೇಡ್ ಯೂನಿಯನ್' ಮೂಲಕ ಕಂಡುಕೊಳ್ಳುವ ಪ್ರಯತ್ನ ಮಾಡಿದರು. 1874ರಲ್ಲಿ 'ವಿಮೆನ್ಸ್ ಪ್ರೊಟೆಕ್ಟಿವ್ ಅಂಡ್ ಪ್ರಾವಿಡೆಂಟ್ ಲೀಗ್' ಅಸ್ತಿತ್ವಕ್ಕೆ ಬಂದಿತು. ಆದರೆ ಬಹಳಷ್ಟು ಮಹಿಳೆಯರು ಈ ಸಂಘಟನೆಯನ್ನು ಗಣಿಸಲಿಲ್ಲ. ಈ ಸಂದರ್ಭದಲ್ಲಿ ಮಹಿಳೆಯರನ್ನು ಕಾರ್ಖಾನೆಯಿಂದ ಹೊರಗಿಡುವ, ತಮ್ಮ ಉದ್ಯೋಗದ ಅವಕಾಶಗಳನ್ನು ಹಾಗೂ ಕೂಲಿಯನ್ನು ಹೆಚ್ಚು ಪಡೆದುಕೊಳ್ಳುವ, ಕುಟುಂಬದ ಹೊಣೆ ಮಹಿಳೆಯರದು ಎಂದು ಬಿಂಬಿಸುವ ಪುರುಷರ ಲಿಂಗಭೇದದ ದೃಷ್ಟಿಕೋನಗಳು ಜಾಗೃತವಾಗಿದ್ದವು.

1903ರಲ್ಲಿ ಅಮೆರಿಕದಲ್ಲಿ ಮಹಿಳಾ ಕಾರ್ಮಿಕ ಸಂಘಟನೆಗಳು ಹಾಗೂ ಉದಾರವಾದಿ ವೃತ್ತಿನಿರತ ಮಹಿಳೆಯರು ಮತದಾನದ ಹಕ್ಕಿಗಾಗಿ ಹೋರಾಟ ನಡೆಸಿರು. ರಾಜಕೀಯ ಹಾಗೂ ಆರ್ಥಿಕ ಹಕ್ಕಿಗಾಗಿ ಮಹಿಳೆಯರ ಟ್ರೇಡ್ ಯೂನಿಯನ್ ಲೀಗ್ ಸ್ಥಾಪಿಸಿದರು. ಈ ಹೋರಾಟದಿಂದ ಸ್ಫೂರ್ತಿ ಪಡೆದ ಜರ್ಮನಿಯ ಕ್ಲಾರಾ ಜಟ್ಕಿನ್ ಸೋಷಿಯಲಿಸ್ಟ್ ಮಹಿಳೆಯರ ಸಮ್ಮೇಳನದಲ್ಲಿ ವರ್ಷಕ್ಕೊಮ್ಮೆ ನಿರ್ದಿಷ್ಟ ದಿನವನ್ನು ಗೊತ್ತುಪಡಿಸಿ ತಮ್ಮ ಹಕ್ಕೊತ್ತಾಯಗಳನ್ನು ಮಂಡಿಸುವ ವ್ಯವಸ್ಥೆ ಜಾರಿಗೆ ತರುವ ನಿಟ್ಟಿನಲ್ಲಿ ಆಲೋಚಿಸಿದಳು.

1910ರಲ್ಲಿ ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನಲ್ಲಿ ಅಂತರರಾಷ್ಟ್ರೀಯ ಸೋಷಿಯಲಿಸ್ಟ್ ಸಮ್ಮೇಳನ ನಡೆಯಿತು. ಹದಿನೇಳು ರಾಷ್ಟ್ರಗಳಿಂದ ಹಲವು ಕಾರ್ಮಿಕ ಸಂಘಟನೆಗಳಿಗೆ ಸೇರಿದ ಮಹಿಳೆಯರು ಭಾಗವಹಿಸಿದ್ದರು. ಅಲ್ಲಿ ಮಹಿಳೆಯರ ಮತದಾನ, ಎಂಟು ಗಂಟೆ ದುಡಿಮೆ, ಹೆರಿಗೆ ರಜೆ, ರಾತ್ರಿ ಪಾಳಿಯ ಕೆಲಸ, ಆರೋಗ್ಯ ವಿಮೆ ಮೊದಲಾದ ಚರ್ಚೆಗಳು ಮುನ್ನೆಲೆಗೆ ಬಂದವು. ಇಲ್ಲಿ ಕ್ಲಾರಾ ಜಟ್ಕಿನ್ ಸೇರಿದಂತೆ ಜರ್ಮನಿಯ ಸಮಾಜವಾದಿ ಪಕ್ಷದ ಮಹಿಳಾ ಹಕ್ಕುಗಳ ಪ್ರತಿಪಾದಕರು ಅಂತರರಾಷ್ಟ್ರೀಯ ಸಮಾಜವಾದಿ ಚಳವಳಿಯ ಮೇಲೆ ಗಾಢ ಪರಿಣಾಮ ಬೀರಿದರು. ಈ ಸಮ್ಮೇಳನದಲ್ಲಿಯೇ ವರ್ಷದಲ್ಲಿ ಒಂದು ದಿನವನ್ನು 'ವಿಶ್ವ ಮಹಿಳಾ ದಿನ'ವನ್ನಾಗಿ ಆಚರಿಸುವ ಪ್ರಸ್ತಾಪ ಮಾಡಿದರು. ಅಂತರರಾಷ್ಟ್ರೀಯ ಮಹಿಳಾ ಸೆಕ್ರೆಟೇರಿಯಟ್ ಮುಖ್ಯಸ್ಥೆಯಾಗಿದ್ದ ಕ್ಲಾರಾ ಕೋಪನ್‌ಹೇಗನ್ ಸಮ್ಮೇಳನದ ಅಧ್ಯಕ್ಷೆಯೂ ಆಗಿದ್ದು, ಮಾರ್ಚ್ 8ನ್ನು ಅಂತರರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಬೇಕೆಂಬ ಪ್ರಸ್ತಾಪ ಮಂಡಿಸಿ, ವಿವಿಧ ದೇಶಗಳ ಪ್ರತಿನಿಧಿಗಳ ಸರ್ವಾನುಮತದ ಒಪ್ಪಿಗೆ ಪಡೆದುಕೊಂಡಳು. ಮಾರ್ಚ್ 8, 1911ರಂದು ಮಹಿಳಾ ದಿನಾಚರಣೆ ಸಂಭ್ರಮದಿಂದ, ಆತ್ಮಾಭಿಮಾನದಿಂದ ವಿಶ್ವದ ಎಲ್ಲೆಡೆ ಆಚರಿಸಲ್ಪಡುತ್ತಿದೆ.

ಕ್ಲಾರಾ ಜುಲೈ 5, 1857ರಲ್ಲಿ ಜರ್ಮನಿಯ ವೀಡೆರೂ ಎಂಬ ಹಳ್ಳಿಯಲ್ಲಿ ಹುಟ್ಟಿದವಳು. ಅವಳ ತಂದೆ ಶಿಕ್ಷಕರು. ತಾಯಿ ಹೆಚ್ಚು ಓದಿದವಳಾಗಿದ್ದಳು. ಲೈಪ್ಜಿಗ್ ಎಂಬ ಸ್ಥಳದಲ್ಲಿ ಶಿಕ್ಷಕ ತರಬೇತಿ ಪಡೆದ ಮೊದಲ ಮಹಿಳೆ ಎಂದು ಕರೆಸಿಕೊಂಡ ಕ್ಲಾರಾ, ಅದೇ ಕಾಲೇಜಿನಲ್ಲಿ ವ್ಯವಸ್ಥಾಪಕಳಾಗಿದ್ದ, ಜರ್ಮನಿಯ ಮಹಿಳಾ ಚಳವಳಿಯ ನಾಯಕಿಯಾಗಿದ್ದ ಆಗಸ್ಟ್ ಸ್ಮಿತ್ ಪ್ರಭಾವಕ್ಕೆ ಸಿಲುಕುತ್ತಾಳೆ.

ಲೈಪ್ಜಿಗ್‌ನಲ್ಲಿ ಓದುತ್ತಿದ್ದಾಗ ಓಸಿಫ್ ಜಟ್ಕಿನ್‌ಅನ್ನು ಮದುವೆಯಾಗಿ ಕ್ಲಾರಾ ಜಟ್ಕಿನ್ ಆಗುತ್ತಾಳೆ. ಜರ್ಮನಿಯ ರಾಜಕೀಯ, ನಾಯಿಗಳ ಆಳ್ವಿಕೆ, ಗಂಡನಿಗೆ ಜರ್ಮನಿಯಿಂದ ಬಹಿಷ್ಕಾರ, ಪ್ಯಾರಿಸ್‌ಗೆ ನೆಲೆಯರಸಿ ಹೋಗಿದ್ದು, ಗಂಡನ ಮರಣ, ಕುಟುಂಬ ನಿರ್ವಹಣೆ, ಚಳವಳಿಗಳು ಅವಳನ್ನು ಮತ್ತಷ್ಟು ದೃಢಗೊಳಿಸುತ್ತದೆ.

ಪತ್ರಕರ್ತೆಯಾಗಿ ದೀರ್ಘಕಾಲ ಕಾರ್ಯ ನಿರ್ವಹಿಸಿದ ಕ್ಲಾರಾ ಮತ್ತವಳ ಸಂಗಡಿಗರ ಹೋರಾಟ ಮಾರ್ಚ್ 8ನ್ನು 'ಅವಳ' ದಿನವೆಂದು ಘನತೆಯಿಂದ ಆಚರಿಸುವಂತೆ ಮಾಡಿತು. ಇಂದು ವಿಶ್ವದಾದ್ಯಂತ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಅಭಿಮಾನದಿಂದ ಸನ್ಮಾನಿಸಲಾಗುತ್ತಿದೆ.

■ **ಅಮೃತಮತಿ**

## ಮಾತೇ ಮುತ್ತು

- ನಾನು ನಿನಗೆ ಹಿಂಸೆಯನ್ನು ಬೋಧಿಸುವುದಿಲ್ಲ. ಏಕೆಂದರೆ ನನಗೆ ಅದರಲ್ಲಿ ನಂಬಿಕೆಯಿಲ್ಲ. ಆದರೆ ಪ್ರಾಣ ಹೋದರೂ ಪರವಾಗಿಲ್ಲ. ಇನ್ನೊಬ್ಬರ ಮುಂದೆ ತಲೆ ಬಗ್ಗಿಸಬೇಡಿ ಎಂದು ಬೋಧಿಸಬಲ್ಲೆ.

  —ಮಹಾತ್ಮ ಗಾಂಧಿ

- ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಬೋಧಿಸುವ ಧರ್ಮವನ್ನು ನಾನು ಪ್ರೀತಿಸುತ್ತೇನೆ.

  —ಬಿ.ಆರ್. ಅಂಬೇಡ್ಕರ್

- ಕ್ರಾಂತಿ ಎಂದರೆ ಅದರಲ್ಲಿ ರಕ್ತಮಯ ಕಲಹ ಇರಬೇಕು ಎಂದೇನೂ ಇಲ್ಲ. ಹಾಗೆಯೇ ವೈಯುಕ್ತಿಕ ದ್ವೇಷಕ್ಕೂ ಇದರಲ್ಲಿ ಅವಕಾಶ ಇಲ್ಲ. ಅದು ಬಾಂಬ್ ಮತ್ತು ಪಿಸ್ತೂಲುಗಳ ಸಂಸ್ಕೃತಿ ಅಲ್ಲ. ನಮ್ಮ ಪ್ರಕಾರ ಕ್ರಾಂತಿ ಎಂದರೆ ಎದ್ದು ಕಾಣುವ ಅನ್ಯಾಯದಿಂದ ಕೂಡಿದ ಈಗಿನ ವ್ಯವಸ್ಥೆ ಬದಲಾಗಬೇಕು

  — ಭಗತ್ ಸಿಂಗ್

- ಶಾಂತಿಯುತ ಕ್ರಾಂತಿಯನ್ನು ಅಸಾಧ್ಯವಾಗಿಸುವವರು ಹಿಂಸಾತ್ಮಕ ಕ್ರಾಂತಿಯನ್ನು ಅನಿವಾರ್ಯವಾಗಿಸುತ್ತಾರೆ.

  —ಜಾನ್ ಎಫ್. ಕೆನಡಿ

- ಅಹಂಕಾರವಿಲ್ಲದ ಮನುಷ್ಯ ಯಾವ ಧರ್ಮಗ್ರಂಥವನ್ನೂ ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ ಮೋಕ್ಷ ಪಡೆಯಬಹುದು.

  —ಸ್ವಾಮಿ ವಿವೇಕಾನಂದ